ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 22.06.2024

**ಮುಂದುವರೆದ ಪಾಟೀ ಸವಾಲು–4 ರಿಂದ 7 ನೇ ಪ್ರತಿವಾದಿ ಪರಃ ಶ್ರೀ. ಎಫ್.ಎಂ.ಎಂ. ವಕೀಲರಿಂದಃ**

ಈ ದಾವೆಯಲ್ಲಿ ಮಾಲಿಂಗಪ್ಪ, ಕಳ್ಳಿಮನಿ ಮಂಜಪ್ಪ, ನಾಗರಾಜ ಕೊಪ್ಪದ, ಸುಧಾ ಹಂಚಿನಮನಿ ಇವರ ಮೇಲೆ ದಾಖಲಿಸಿರುತ್ತೇನೆ. ಈ ಮೇಲಿನವರು ಹನುಮಂತಪ್ಪನ ಗರಾಣಿಗೆ ಸಂಬಂಧಿಸಿದವರು ಇರುವುದಿಲ್ಲಾ ಎಂದರೆ ಸರಿ. ಈ ದಾವೆಯಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಸೇರಿರುತ್ತೇನೆ. ಈ ದಾವೆಯಲ್ಲಿ 1 ಎಕರೆ 22 ಗುಂಟೆ ಆಸ್ತಿಯನ್ನು ಸೇರಿಸಿರುತ್ತೇನೆ. ಬೇರೆ ಯಾವುದೇ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲಾ. ನಮ್ಮ ಹಿರಿಯರಿಗೆ ಯಾವುದೇ ಪಂಚಾಯತಿ ಆಸ್ತಿ ಇರುವುದಿಲ್ಲಾ. ನಮ್ಮ ದಾವೆಯಲ್ಲಿ ಕ ಆಸ್ತಿಯನ್ನು ಸೇರಿಸಿದ್ದು ಅದನ್ನು ಮೂಕಪ್ಪ ಹಾಲಪ್ಪ ಉಪ್ಪಣಸಿ ಇವರಿಗೆ 1 ನೇ ಪ್ರತಿವಾದಿ ಮಾರಾಟ ಮಾಡಿದ್ದಾನೆ ಅಂದರೆ ಸರಿಯಲ್ಲಾ. ಸದರಿ ದಾವಾ ಶೆಡ್ಯುಲ್ ಕ ಆಸ್ತಿ ಪಂಚಾಯತದಲ್ಲಿ ಮೂಕಪ್ಪನ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲಾ. ಪ್ರತಿವಾದಿಯರು ಏನು ತಕರಾರು ಹಾಕಿರುತ್ತಾರೆ ಅಂತಾ ನಾನು ಓದಿ ತಿಳಿದುಕೊಂಡಿರುವುದಿಲ್ಲಾ. ಪ್ರತಿವಾದಿಯರು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಅಂತಾ ನಾನು ನೋಡಿರುವುದಿಲ್ಲಾ. ಈ ದಾವೆ ದಾಖಲಿಸುವ ಪೂರ್ವದಲ್ಲಿ 1 ಎಕರೆ 22 ಗುಂಟೆ ಎಷ್ಟು ಪೋಟ್ ಹಿಸ್ಸಾ ಇದ್ದವು ಅಂತಾ ನನಗೆ ಗೊತ್ತಿಲ್ಲಾ. ನನಗೆ ಓದಲು ಬರೆಯಲು ಬರುವುದಿಲ್ಲಾ. ದಾವಾ ಆಸ್ತಿ ಹನುಮಂತಪ್ಪನಿಗೆ ಯಾವಾಗ ಬಂತು ಮತ್ತು ಹೇಗೆ ಬಂತು ಅಂತಾ ನನಗೆ ಗೊತ್ತಿಲ್ಲಾ. ಈ ದಾವೆ ದಾಖಲಿಸಲು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ. ಪ್ರಮಾಣ ಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿ ವಿಳಾಸ ಮತ್ತು ದಿನಾಂಕ ತಿದ್ದುಪಡಿ ದ್ದರಿಂದ ನಾನು ಹೇಳಿ ಬರೆಸಿಲ್ಲಾ ಅಂದರೆ ಸರಿಯಲ್ಲಾ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿ ನಾನು ಬರೆಸಿದ್ದರೆ ಸರಿಯಾಗಿ ಬರೆಸುತ್ತಿದ್ದೆ ಎಂದರೆ ಸರಿಯಲ್ಲಾ. ಹನುಮಂತಪ್ಪ ಮತ್ತು ಗುತ್ತೆವ್ವ ಇವರು ಜಯಶೀಲಪ್ಪ ಮತ್ತು ಮಲ್ಲಪ್ಪ ಇವರ ವಿರುದ್ಧ ದಾವಾ ಆಸ್ತಿ ಮತ್ತು ಇನ್ನೂಳಿದ ಆಸ್ತಿಗಳಿಗೆ ಪಾಲು ಕೊಡಬೇಕು ಅಂತಾ ಅಸಲು ದಾವಾ ನಂಃ 88/1994 ನ್ನು ದಾಖಲಿಸಿದ್ದರು ಎಂದರೆ ಅದು ನಮಗೆ ಸಂಬಂಧ ಇಲ್ಲಾ ಎಂದು ನುಡಿಯುತ್ತಾರೆ. ಸದರಿ ದಾವೆ

ಬಗ್ಗೆ ನನಗೆ ಮಾಹಿತಿ ಇಲ್ಲಾ. ಸದರಿ ದಾವಾಯಲ್ಲಿ ಹಿರಿಯ ಸಮಕ್ಷಮ ರಾಜೀ ಮಾಡಿ ಡಿಕ್ರಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಸದರಿ ದಾವೆಯಲ್ಲಿ ಗುತ್ತೆವ್ವ ಯಾವುದೇ ಆಸ್ತಿ ಪಡೆಯದೇ 1 ನೇ ಪ್ರತಿವಾದಿಗೆ 1 ಎಕರೆ 22 ಗುಂಟೆ ಜಮೀನನ್ನು ರಾಜೀ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ. ನಂತರ ಪಂಚಾಯತಿ ಆಸ್ತಿಗಳು ಸಾಮೂಹಿಕ ಇರಬೇಕು ಅಂತಾ ರಾಜೀ ಪತ್ರದಲ್ಲಿಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ನಾನು ಹಾಜರು ಮಾಡಿದ ದಾಖಲೆಗಳ ಬಗ್ಗೆ ನನಗೆ ಗೊತ್ತು. ನಾನು ದಾವೆ ದಾಖಲಿಸುವ ಪೂರ್ವದಲ್ಲಿ 4 ರಿಂದ 7 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಯಲ್ಲಿ ಮಾಲೀಕರು ಮತ್ತು ಕಬ್ಜಾದಾರರು ಅಂತಾ ದಾಖಲಾಗಿದೆ ಎಂದರೆ ಸರಿಯಲ್ಲಾ. ನಿಪಿ-01 ರಿಂದ 04 ರಲ್ಲಿ 4 ರಿಂದ 7 ನೇ ಪ್ರತಿವಾದಿಯರು ಮಾಲೀಕರು ಅಂತಾ ದಾಖಲಾಗಿದೆ ಎಂದರೆ ಸರಿಯಲ್ಲಾ. ದಾವಾ ಆಸ್ತಿ ಗಾಳಪೂಜಿ ಗ್ರಾಮಕ್ಕೆ ಹೊಂದಿಕೊಂಡು ಇದೆ ಎಂದರೆ ಸರಿ. ಉತ್ತರಕ್ಕೆ ಬ್ಯಾಡಗಿ ತಿಳುವಳ್ಳಿ ರಸ್ತೆ ಇದೆ ಎಂದರೆ ಸರಿಯಲ್ಲಾ. ದಕ್ಷಿಣಕ್ಕೆ ಹೊಲಗಳಿಗೆ ಹೋಗಲು ದಾರಿ ಇದೆ ಎಂದರೆ ಸರಿಯಲ್ಲಾ. ದಾವಾ ಆಸ್ತಿ ಗ್ರಾಮದ ಹತ್ತಿರ ಇರುವುದರಿಂದ ಊರ ದನಗಳು ಮೈದು ಬೆಳೆಯನ್ನು ಹಾಳು ಮಾಡುತ್ತಿದ್ದವು ಅಂದರೆ ಸರಿಯಲ್ಲಾ. ಊಳಿದ ಬೆಳೆಯನ್ನು ರಾತ್ರಿ ಊರ ಜನರು ಕದಿಯುತ್ತಿದ್ದರು ಎಂದರೆ ಸರಿಯಲ್ಲಾ. ಆದ್ದರಿಂದ 1 ನೇ ಪ್ರತಿವಾದಿ ಸಾಗೂ ಮಾಡದೇ ಹಾಗೇ ಬಿಟ್ಟಿದ್ದಾ ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿಗೆ ಲೂಕ್ಸಾನ ಆಗಿರುವುದರಿಂದ ಹರಿಹರಕ್ಕೆ ಹೋಗಿ ದುಡಿದು ತಿನ್ನಲು ಹೋಗಿರುತ್ತಾನೆ ಎಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ಬಂದು ಉಳುಮೆ ಮಾಡಿ ಹೋಗುತ್ತಿದ್ದೇವು ಅಂತಾ ಹೇಳುತ್ತಾರೆ. 1 ನೇ ಪ್ರತಿವಾದಿ ಹರಿಹರದಲ್ಲಿ ಮದುವೆಯಾಗಿ ಅಲ್ಲೆ ವಾಸವಾಗಿದ್ದಾನೆ ಎಂದರೆ ಸರಿ. 3 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ ಅಂದರೆ ಸರಿ. 1 ನೇ ಪ್ರತಿವಾದಿ ಜಮೀನನ್ನು ಮಾರಿ ತನ್ನ ಹೆಂಡತಿಯ ಊರಿನಲ್ಲಿ ಬೇರೆ ಆಸ್ತಿಯನ್ನು ಹಿಡಿದಿದ್ದಾನೆ ಅಂದರೆ ಸರಿಯಲ್ಲಾ. 1 ಮತ್ತು 3 ನೇ ಪ್ರತಿವಾದಿಯ ವಿಳಾಸ ಯಾವುದು ನನ್ನ ದಾವೆಯಲ್ಲಿ ತೋರಿಸಿದ್ದೆನೆ ಅಂದರೆ ನನಗೆ ನೆನಪಿಲ್ಲಾ. ಈ ದಾವೆಯನ್ನು ಸಲ್ಲಿಸಲು ಬಾಲಪ್ಪ ಮಾಹಿತಿ ಕೊಟ್ಟಿದ್ದಾನೆ ಅಂದರೆ ಸರಿಯಲ್ಲಾ. ಬಾಲಪ್ಪ

ಮರಣ ಹೊಂದಿದ್ದಾನೆ ಅಂದರೆ ಸರಿ. ಬಾಲಪ್ಪ ಇವನು ಶಿಡೇನೂರ ವಕೀಲರಿಗೆ ದಾವಾ ಆಸ್ತಿಯ ದಾಖಲೆಗಳನ್ನು ತೆಗೆದುಕೊಡುವುದು ಮಾಡುತ್ತಿದ್ದನು ಅಂದರೆ ಸರಿಯಲ್ಲಾ. ಈ ದಾವೆ ಸಲ್ಲಿಸಲು ಶಿಡೇನೂರ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಶಿಡೇನೂರ ವಕೀಲರ ಹತ್ತಿರ ಗುತ್ತೆಮ್ಮ ಬರುವ ಬಗ್ಗೆ ನನಗೆ ಗೊತ್ತಿಲ್ಲಾ. ನಾನು ಮತ್ತು 2 ನೇ ಪ್ರತಿವಾದಿ ಇಬ್ಬರೂ ಸೇರಿಕೊಂಡು ಈ ದಾವೆ ಸಲ್ಲಿಸಿದ್ದೇವೆ ಅಂದರೆ ಸರಿ. 2 ನೇ ಪ್ರತಿವಾದಿ ಈ ದಾವೆ ಸಲ್ಲಿಸುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲಾ. ಆ ಸಮಯದಲ್ಲಿ 2 ನೇ ಪ್ರತಿವಾದಿಗೆ ದಾವಾ ಆಸ್ತಿ ಯಾರ ಹೆಸರಿಗೆ ಇದೆ ಅಂತಾ ಗೊತ್ತಿತ್ತು ಅಂದರೆ ನನಗೆ ಗೊತ್ತಿಲ್ಲಾ. 2 ನೇ ಪ್ರತಿವಾದಿ 1, 4 ಮತ್ತು 5 ನೇ ಪ್ರತಿವಾದಿಯರ ವಿರುದ್ಧ ಪಾಲು ದಾವೆ ಕೋರಿ ಅಸಲು ದಾವಾ ನಂಬರ 18/2006 ಅಂತಾ ದಾಖಲಿಸಿದ್ದಳು ಅಂದರೆ ಸರಿಯಲ್ಲಾ. ಸದರಿ ದಾವಾ ವಿಚಾರಣೆ ಆಗಿ ದಿನಾಂಕಃ 29.01.2007 ರಂದು ವಜಾ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲಾ. ಸದರಿ 2 ನೇ ಪ್ರತಿವಾದಿಗೆ 4 ಮತ್ತು 5 ನೇ ಪ್ರತಿವಾದಿಯರು ಮಾಲೀಕರು ಮತ್ತು ಕಬ್ಜಾ ಇದ್ದ ಬಗ್ಗೆ ಗೊತ್ತಿದ್ದರಿಂದ ಸದರಿ ದಾವೆ ಕಿತ್ತು ಹಾಕಲಾಗಿದೆ ಎಂದರೆ ಸರಿಯಲ್ಲಾ. ಸದರಿ ಆದೇಶದ ನಕಲನ್ನು ಪ್ರತಿವಾದಿಯರು ಹಾಜರುಪಡಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಹನುಮತಂಪ್ಪನ ಗರಾಣಿಕ್ಕೆ ಪಂಚಾಯತಿ ನಂಃ 45 ಮತ್ತು 407 ಇವೆ ಎಂದರೆ ಸರಿಯಲ್ಲಾ. ಸದರಿ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಇವೆ ಎಂದರೆ ಸರಿಯಲ್ಲಾ. 4 ರಿಂದ 7 ನೇ ಪ್ರತಿವಾದಿಯರು ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿಯು ನಮ್ಮ ತಂದೆಯದು ಮಾತ್ರ ಇದೆ ಎಂದು ನುಡಿಯುತ್ತಾರೆ. ಸದರಿ ಮೇಲಿನ ಆಸ್ತಿಗಳು ಗೊತ್ತಿದ್ದರು ಸಹ ಈ ದಾವೆಯಲ್ಲಿ ಸೇರಿಸಿಲ್ಲಾ ಎಂದರೆ ಸರಿಯಲ್ಲಾ. ನನಗೆ ಈ ಬಗ್ಗೆ ಗೊತ್ತಿದ್ದರು ಸಹ ಬುದ್ಯಾ ಪೂರ್ವಕವಾಗಿ ಆಸ್ತಿಗಳನ್ನು ಸೇರಿಸಿಲ್ಲಾ ಎಂದರೆ ಸರಿಯಲ್ಲಾ. ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿಗೆ ಬಂದ ಮೇಲೆ ನಕ್ಷೆ ಮಾಡಿ 11-ಇ ತಯಾರಿಸಿದ್ದಾ ಎಂದರೆ ನನಗೆ ಗೊತ್ತಿಲ್ಲಾ. ಪ್ರತಿವಾದಿ 04 ರಿಂದ 07 ರವರು 1 ನೇ ಪ್ರತಿವಾದಿ ಖರೀದಿ ಕೊಡುವ ಪೂರ್ವದಲ್ಲಿಂದ ದಾವಾ ಆಸ್ತಿಯಲ್ಲಿ ವಹಿವಾಟು ಮಾಡುತ್ತಾ ಇದ್ದರು ಎಂದರೆ

ಸರಿಯಲ್ಲಾ. ಸದರಿ ಆಸ್ತಿಯಲ್ಲಿ ತಿಪ್ಪಿ, ಬತ್ತದ ಬಣವಿ ಒಟ್ಟುತಿದ್ದರು ಎಂದರೆ ಸರಿಯಲ್ಲಾ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲಾ. ದಾವಾ ಆಸ್ತಿ ಊರ ಹತ್ತಿರ ಇದ್ದರೂ ಅಲ್ಲಿ 2 ಕಡೆ ರಸ್ತೆ ಇದ್ದು ನಾನು ದಾವಾ ಆಸ್ತಿಯನ್ನು ನೋಡಿಲ್ಲಾ ಎಂದರೆ ಸರಿಯಲ್ಲಾ. ಸದರಿ ದಾವಾ ಆಸ್ತಿಯನ್ನು ದಿಃ 27.08.2005 ರಂದು 1 ನೇ ಪ್ರತಿವಾದಿ 4 ಮತ್ತು 5 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲಾ. ನಂತರ ಖರೀದಿ ಪತ್ರಗಳು 2005 ರಲ್ಲಿ ಅಂತಾ ದಾಖಲಾಗಿ ಮ್ಯುಟೇಶನ ಆಗಿವೆ ಅಂದರೆ ಸರಿಯಲ್ಲಾ. ಅದೇ ರೀತಿ 28.02.2008 ಮತ್ತು 21.08.2012 ರಲ್ಲಿ ಖರೀದಿ ಪತ್ರ ಆಗಿವೆ ಎಂದರೆ ನನಗೆ ಗೊತ್ತಿಲ್ಲಾ. ಸದರಿ ಆಸ್ತಿಯಲ್ಲಿ ಖರೀದಿ ಪತ್ರದ ಪ್ರಕಾರ ಮನೆಗಳನ್ನು ಕಟ್ಟಿಕೊಂಡು 4 ರಿಂದ 7 ನೇ ಪ್ರತಿವಾದಿಯರು ವಾಸವಾಗಿದ್ದಾರೆ ಎಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ನಮ್ಮನ್ನು ಹೆದರಿಸಿ 1 ಮನೆ ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ದೂರನ್ನು ಸಲ್ಲಿಸಿದ್ದೇನೆ. ಮನೆ ಖಾಲಿ ಮಾಡಿಕೊಂಡು ಅಂತಾ ದಾವೆ ಹಾಕಿಲ್ಲಾ ಆದರೆ ಈ ದಾವೆ ಸಲ್ಲಿಸಿದ್ದೆನೆ. ಸದರಿ 7 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಹೈಸ್ಕೂಲ್ ಬಿಲ್ಡಿಂಗ ಕಟ್ಟಿದ್ದಾನೆ ಅಂದರೆ ಸಾಕ್ಷಿಯು ನಮ್ಮನ್ನು ಹೆದರಿಸಿ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ದೂರನ್ನು ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲಾ ಆದರೆ ನ್ಯಾಯಾಲಯದಲ್ಲಿ ದಾವೆ ಇದೆ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿಯ ವಿರುದ್ದ ನಿರ್ಬಂದಕಾಜ್ಞೆ ಪಡೆದಿರುವುದಿಲ್ಲಾ. ಈ ದಾವೆ ಸಲ್ಲಿಸುವ 15 ವರ್ಷದ ಹಿಂದಿನಿಂದಲೂ ಅನಧಿಕೃತವಾಗಿ ಕಬ್ಜಾದಲ್ಲಿ ಇದ್ದರು ನಂತರ ಖರೀದಿ ಹಿಡಿದ ಮೇಲೆ ಕಾನೂನು ಮಾಲೀಕರು ಅಂತಾ 4 ರಿಂದ 7 ನೇ ಪ್ರತಿವಾದಿಯರು ಇದ್ದಾರೆ ಎಂದರೆ ಸಾಕ್ಷಿಯು ನಮ್ಮನ್ನು ಹೆದರಿಸಿ ಇದ್ದಾರೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನಮ್ಮನ್ನು ಹೆದರಿಸಿ ಮನೆ ಕಟ್ಟಿಕೊಂಡಿರುತ್ತಾರೆ ಅಂತಾ ಹೇಳಿರುತ್ತೇನೆ. ನನಗೆ ಮನೆಕಟ್ಟಿಕೊಂಡಿರುವುದು ಗೊತ್ತಿದ್ದರು ಸಹ ಇದೆ ಮೊದಲ ಬಾರಿಗೆ ಹೆದರಿಸಿ ಮನೆ ಕಟ್ಟಿಕೊಂಡಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಆದೇಶಿಸಿ

ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.